# Library & Information Centre

## GIT NEWS

**Indian Express 29-04-2016**



### New MTech Courses

The Karnataka Law Society's Gogte Institute of Technology will start two new masters programmes in industrial engineering and management and automotive electronics. ENS

# Library & Information Centre

**Deccan Herald 29-04-2016**

## KLS Gogte institute to offer 2 new masters programme

BELAGAVI, DHNS: KLS Gogte Institute of Technology (GIT) is starting two new masters programme in Industrial Engineering and Management & Automotive Electronics.

The institute will offer MTech in Industrial Management most sought after programmes across the globe.

The programme deals with the ergonomics human engineering, innovative product designs and concepts of total quality management, lean manufacturing. Programme comprises of extensive internship and work with industry based live projects.

The institute is interacting with few national level institutes to seek their association for the conduct of this programme.

MTech in Automotive Electronics is a core engineering programme being offered by Department of Electronics Engineering in association with Mechanical & Electrical Engineering.

The course is being offered with active support from major industrial players with the help of trained teaching staff and domain experts. Both programmes are of two years duration and degree is offered by Visvesvaraya Technological University (VTU) under autonomous status of GIT. For details: Dean Academics (9611606975).

# Library & Information Centre

**Vijay Karnataka 29-04-2016**

# ವಿಟಿಯು ಘಟಿಕೋತ್ಸವ ಹಠಾತ್ ಮುಂದೂಡಿಕೆ

» ಮೊದಲ ಪುಟದಿಂದ

ಈ ಸಾಲಿನ ಎಲ್ಲ ವಿಭಾಗಗಳಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದು, ಅತಿ ಹೆಚ್ಚು ಚಿನ್ನದ ಪದಕ ಪಡೆದವರ ಸಾಲಿನಲ್ಲಿ ಮೊದಲ ಮೂವರೂ ವಿದ್ಯಾರ್ಥಿನಿಯರೇ ಇದ್ದಾರೆ. ಎಲ್ಲ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದಿದ್ದ 86173 ವಿದ್ಯಾರ್ಥಿಗಳ ಪೈಕಿ 68960 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಆ ಪೈಕಿ ಶೇ.88.96ರಷ್ಟು ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದಾರೆ. ಬೆಂಗಳೂರಿನ ಡಿಎಸ್‌ಸಿಇ ಕಾಲೇಜು ಅತಿ ಹೆಚ್ಚು 50 ರ‍್ಯಾಂಕ್ ಪಡೆದು ಮೊದಲ ಸ್ಥಾನದಲ್ಲಿದ್ದರೆ, ಬೆಂಗಳೂರಿನ ಬಿಐಟಿ 25, ಆಚಾರ್ಯ ಇನ್‌ಸ್ಟಿಟ್ಯೂಟ್ 23 ರ‍್ಯಾಂಕ್ ಪಡೆಯುವ ಮೂಲಕ ನಂತರದ ಸ್ಥಾನ ಪಡೆದುಕೊಂಡಿವೆ. ಬಿಐಟಿ 20 ಮತ್ತು ಪಿಇಎಸ್‌ಐಟಿ 19 ರ‍್ಯಾಂಕ್ ಪಡೆದುಕೊಂಡಿದ್ದರೆ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳು 17 ರ‍್ಯಾಂಕ್ ಪಡೆದುಕೊಂಡಿವೆ. ಬೆಳಗಾವಿಯ ಜಿಐಟಿ ಕಾಲೇಜು 13 ರ‍್ಯಾಂಕ್ ಪಡೆದು ಬೆಂಗಳೂರಿನ ಎಂವಿಜೆ ಕಾಲೇಜಿನೊಂದಿಗೆ 9ನೇ ಸ್ಥಾನ ಹಂಚಿಕೊಂಡಿದೆ.

ಎಂಟೆಕ್‌ನಲ್ಲಿ ವಿಟಿಯು ಸ್ನಾತಕೋತ್ತರ ಕೇಂದ್ರಗಳು ಮತ್ತು ಬೆಂಗಳೂರಿನ ಆರ್‌ವಿಸಿಇ ಕಾಲೇಜು ಅತಿ ಹೆಚ್ಚು 17 ರ‍್ಯಾಂಕ್ ಪಡೆದು ಮೊದಲ ಸ್ಥಾನ ಹಂಚಿಕೊಂಡಿವೆ. ಬೆಂಗಳೂರಿನ ಪಿಇಎಸ್‌ಐಟಿ 16, ಬಿಎಂಎಸ್‌ಸಿಇ 11, ಡಿಎಸ್‌ಸಿಇ 10 ರ‍್ಯಾಂಕ್ ಪಡೆದುಕೊಳ್ಳುವ ಮೂಲಕ ನಂತರದ ಸ್ಥಾನದಲ್ಲಿವೆ. ಬಿಇ, ಬಿಟೆಕ್ ಪದವಿಗಳಲ್ಲಿ ಬೆಂಗಳೂರಿನ ಕಾಲೇಜುಗಳು ಮೊದಲ 8 ಸ್ಥಾನ ಪಡೆದುಕೊಂಡಿವೆ. ಡಿಎಸ್‌ಸಿಇ 35, ಬಿಐಟಿ 19, ಆಚಾರ್ಯ ಇನ್‌ಸ್ಟಿಟ್ಯೂಟ್ 19, ಎಂವಿಜೆ 10, ಆರ್‌ಎನ್‌ಎಸ್ ಇನ್‌ಸ್ಟಿಟ್ಯೂಟ್ 9, ಎಸ್‌ಜೆಬಿಐಟಿ 8, ಬಿಎನ್‌ಎಂ ಇನ್‌ಸ್ಟಿಟ್ಯೂಟ್ 7, ಅತ್ರಿಯಾ ಇನ್‌ಸ್ಟಿಟ್ಯೂಟ್ 6 ರ‍್ಯಾಂಕ್ ಪಡೆದುಕೊಂಡಿವೆ. ಬೆಳಗಾವಿಯ ಜಿಐಟಿ ಕಾಲೇಜು ಕೂಡ 6ರ‍್ಯಾಂಕ್ ಪಡೆದು 8ನೇ ಸ್ಥಾನವನ್ನು ಹಂಚಿಕೊಂಡಿದೆ.

## ಎಂಜಿನಿಯರ್‌ಗೆ ಹೆಚ್ಚಿದ ಬೇಡಿಕೆ

ಜಪಾನ್ ದೇಶ 40 ಸಾವಿರ ಎಂಜಿನಿಯರ್‌ಗಳಿಗಾಗಿ ಬೇಡಿಕೆ ಇಟ್ಟಿದೆ. ಶೀಘ್ರ, ಪ್ರತಿಭಾವಂತ ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಉದ್ಯೋಗ ಅವಕಾಶ ಸೃಷ್ಟಿಸಲಾಗುವುದು ಎಂದು ವಿಟಿಯು ಪ್ರಭಾರಿ ಕುಲಪತಿ ಡಾ.ಎಚ್.ಜಿ.ಶೇಖರಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಇತ್ತೀಚೆಗೆ ಜಪಾನ್ ದೇಶದ ಐಟಿ ಸಂಸ್ಥೆಗಳ ಒಕ್ಕೂಟ ಸಿಲ್ವರ್‌ಪೀಕ್ ಗ್ಲೋಬಲ್ ಸಂಸ್ಥೆ ಪ್ರತಿನಿಧಿಗಳು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಸರಕಾರಿ ಒಡಂಬಡಿಕೆಗೆ ಸಹಿ ಹಾಕಿದ್ದಾರೆ. ಜಪಾನ್ ದೇಶದ ವಿವಿಧ ಐಟಿ ಸಂಸ್ಥೆಗಳಲ್ಲಿ ಎಂಜಿನಿಯರ್‌ಗಳ ಅವಶ್ಯಕತೆ ಇದ್ದು, ವಿಶೇಷವಾಗಿ ಕರ್ನಾಟಕ ರಾಜ್ಯದಿಂದಲೇ ನಾನಾ ವಿಭಾಗಗಳಲ್ಲಿ ತರಬೇತಿ ಮುಗಿಸಿ ಹೊರ ಬರುವ 40 ಸಾವಿರ ಎಂಜಿನಿಯರ್‌ಗಳಿಗೆ ಬೇಡಿಕೆ ಇಟ್ಟಿದ್ದಾರೆ ಎಂದು ತಿಳಿಸಿದರು.

## ಚಿನ್ನದ ಹುಡುಗಿಯರು...

15ನೇ ಘಟಿಕೋತ್ಸವದ ಅತಿ ಹೆಚ್ಚು ಚಿನ್ನದ ಪದಕ ಮೈಸೂರು ಜೆಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆಂಡ್ ಟೆಕ್ನಾಲಜಿ ಫಾರ್ ವುಮೆನ್ಸ್ ಕಾಲೇಜಿನ ಮಂಜೇಶ್ವರ ಗಾಯತ್ರಿ ಪ್ರಭು ಅವರ ಪಾಲಾಗಿದೆ. ಬಿಇ ಎಲೆಕ್ಟ್ರಿಕಲ್ ಆಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಗಾಯತ್ರಿ ಅತಿಹೆಚ್ಚು ಅಂಕ ಪಡೆದು ಒಟ್ಟು 9 ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಬಿಇ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿಯ ನಿವೇದಿತಾ ಎಂ. ಒಟ್ಟು 7 ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಬಿಇ ಕಂಪ್ಯೂಟರ್ ಸೈನ್ಸ್ ಆಂಡ್ ಎಂಜಿನಿಯರಿಂಗ್‌ನಲ್ಲಿ ಅತಿ ಹೆಚ್ಚು ಅಂಕ ಪಡೆದ ಬೆಂಗಳೂರಿನ ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ದೀಪ್ತಿ ದೇವರಾಜ 6 ಚಿನ್ನದ ಪದಕ ಪಡೆದುಕೊಂಡಿದ್ದಾರೆ.



ದೀಪ್ತಿ ದೇವರಾಜ, ನಿವೇದಿತಾ ಎಂ., ಮಂಜೇಶ್ವರ ಗಾಯತ್ರಿ ಪ್ರಭು